-   -                    ಸಿ.ಸಿ. ನಂ. **388/2018**     ಸಿ ಡಬ್ಲೂ **6**     ಪಿ ಡಬ್ಲೂ **6**

ದಿ:  22-02-2025  ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರಿದ ವಾಟೀಸವಾಲು: ಶ್ರೀ ಎಮ್ ಎಮ್    ವಕೀಲರಿಂದ:**

1. ಶಿವರಾಯ ಬಿಜೆಸಪುರ ಗ್ರಾಮಕ್ಕೆ  ಏನಿಕ್ಕೆ ಹೋಗಿದ್ದನು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಶಿವರಾಯನಿಗೆ  ತಿಮ್ಮಪ್ಪ, ಸಿದ್ದಪ್ಪ ಮತ್ತು ಮಲಕಪ್ಪ  ಎಂಬ 3 ಜನ ಮಕ್ಕಳಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ.  ನಾನು ಮತ್ತು ನನ್ನ ಅಣ್ಣ ಚಾಸಾ-1 ದುಡಿಯಲು ಪುನಾ ಕ್ಕೆ ಎಷ್ಟನೇ ಇಸ್ವಿಯಲ್ಲಿ ಹೋಗಿದ್ದೇವು ಎಂದು ನೆನಪಿಲ್ಲ ಆಗ ನಾವು ಸಣ್ಣವರಿದ್ದೇವು.  2003 ನೇ ಇಸ್ವಿಯಲ್ಲಿ ಪುನಾದಿಂದ ವಾಪಸ್ಸು ಬಂದಿರುತ್ತೇವೆ.  ಒಟ್ಟು 15 ವರ್ಷ ಪುನಾದಲ್ಲಿದ್ದೇವು.  ನಾವು ಪುನಾಕ್ಕೆ

ದುಡಿಯಲು ಹೋದಾಗ ನಮ್ಮ ತಾಯಿ ಹನುಮವ್ವ ಇವರು ಸುಣ್ಣದಕಲ್ಲು ಗ್ರಾಮದಲ್ಲಿ ಇದ್ದರು. ಕೇಸ್ ಮಾಡಿರುವ ಜಮೀನಿನ ಪಹಣಿಯನ್ನು ನಾನು ನೋಡಿಲ್ಲ. ಪಹಣಿಯಲ್ಲಿ ಎಷ್ಟು ಜನರ ಹೆಸರು ಇವೆ ಎಂದು ನಾನು ನೋಡಿಲ್ಲ. 16 ಎಕರೆ 07 ಗುಂಟೆ ಜಮೀನಿನ ಪಹಣೀಯಲ್ಲಿ ಯಾರ ಯಾರ ಹೆಸರಿನಲ್ಲಿ ಎಷ್ಟು ಎಕರೆ ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪೋಲಿಸರ ಮುಂದೆ ಯಾರ ಯಾರ ಹೆಸರನಲ್ಲಿ ಎಷ್ಟು ಎಕರೆ ಗುಂಟೆ ಪಹಣಿ ಆಗಿದೆ ಎಂದು ಹೇಳಿಲ್ಲ. ಆರೋಪಿತರು ಯಾವ ವರ್ಷದಲ್ಲಿ ಪಹಣಿಯು ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ನನ್ನ ಅಣ್ಣನಿಗೆ ಗೊತ್ತು ಎನ್ನುತ್ತಾರೆ. ನಿಮ್ಮ ಅಣ್ಣ ಹೇಳಿದ ಪ್ರಕಾರ ನೀವು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಈಗ ಪಹಣಿಯಲ್ಲಿ ನಿಮ್ಮ ಅಣ್ಣ ಚಾಸಾ-1 ಅವರ ಹೆಸರಿನಲ್ಲಿ 05 ಎಕರೆ 15 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು ಆತನಿಗೆ ಗೊತ್ತು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈಗ ಪಹಣಿಯಲ್ಲಿ 02 ರಿಂದ 04 ನೇ ಆರೋಪಿತರ ಹೆಸರಿನಲ್ಲಿ ತಲಾ 03 ಎಕರೆ 24 ಗುಂಟೆ ನಮೂದು ಆಗಿದೆ ಎಂದರೆ ಸಾಕ್ಷಿಯು ಇರಬೇಕು ಎನ್ನುತ್ತಾರೆ. ನಿಮ್ಮ ಅಣ್ಣ ಚಾಸಾ-1 ಹೆಸರಿನಲ್ಲಿ 05 ಎಕರೆ 15 ಗುಂಟೆ ಯಾಕೆ ಮಾಡಿಸಿದರು ಎಂದರೆ ಸಾಕ್ಷಿಯು ಅವರಿಗೆ ಗೊತ್ತು ನನಗೆ ಗೊತ್ತಿಲ್ಲ ಎನ್ನುತ್ತಾರೆ.

2. 16 ಎಕರೆ 07 ಗುಂಟೆ ಜಮೀನಿನಲ್ಲಿ ಶಿವರಾಯ ನ ಭಾಗಕ್ಕೆ 08 ಎಕರೆ 08 ಗುಂಟೆ ಜಮೀನು ಭಾಗಕ್ಕೆ ಇತ್ತು ಎಂದರೆ ಅವರು ನಮಗೆ ಸಂಬಂಧ ಇಲ್ಲ ಎನ್ನುತ್ತಾರೆ. ಶಿವರಾಯನ 03 ಜನ ಮಕ್ಕಳು, ಸಿದ್ದಪ್ಪ, ಮಲಕಪ್ಪ, ತಿಮ್ಮಯ್ಯ ಇವರು 1ನೇ ಆರೋಪಿಗೆ 08 ಎಕರೆ 08 ಗುಂಟೆ ಜಮೀನು ಮಾರಾಟ ಮಾಡಿ ಖರೀದಿ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. 16 ಎಕರೆ 07 ಗುಂಟೆ ಜಮೀನಿನಲ್ಲಿ 1 ನೇ ಆರೋಪಿಯ ತಂದೆ ಭೀಮಯ್ಯನಿಗೆ 02 ಎಕರೆ 24 ಗುಂಟೆ ಭಾಗ ಬಂದಿತ್ತು

ಎಂದರೆ ಸಾಕ್ಷಿಯು ಇಲ್ಲ ನನ್ನ ತಂದೆ ಒಬ್ಬರೆ ಇದ್ದರು ಎನ್ನುತ್ತಾರೆ. ನಿಮ್ಮ ತಂದೆ ಬಾಲಪ್ಪನಿಗೆ 05 ಎಕರೆ 15 ಗುಂಟೆ ಭಾಗಕ್ಕೆ ಬಂದಿತ್ತು ಎಂದರೆ ಸಾಕ್ಷಿಯು ಇಲ್ಲ 16 ಎಕರೆ 07 ಗುಂಟೆ ಭಾಗಕ್ಕೆ ಬಂದಿತ್ತು ಎನ್ನುತ್ತಾರೆ. 1ನೇ ಆರೋಪಿ 08 ಎಕರೆ 08 ಗುಂಟೆ ಜಮೀನು ಖರೀದಿ ಮಾಡಿದ್ದಾನೆ ಮತ್ತು ಆತನ ತಂದೆಗೆ 02 ಎಕರೆ 24 ಗುಂಟೆ ಜಮೀನು ಭಾಗದಲ್ಲಿ ಬಂದಿದೆ ಒಟ್ಟು 10 ಎಕರೆ 32 ಗುಂಟೆ ಆತನ ಭಾಗಕ್ಕೆ ಬಂದಿತ್ತು ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಈಗ ಆತನ ಭಾಗಕ್ಕೆ ಬಂದಿದ್ದ 10 ಎಕರೆ 32 ಗುಂಟೆ ಜಮೀನಿನಲ್ಲಿ ಆತನ ಹೆಂಡತಿ ಮಕ್ಕಳ ಹೆಸರಿಗೆ ತಲಾ 03 ಎಕರೆ 24 ಗುಂಟೆ ಮುಟೇಶನ್ ಮಾಡಿದಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಮೋಸದಿಂದ ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. ನಿಮ್ಮ ತಂದೆಯ ಭಾಗಕ್ಕೆ ಬರಬೇಕಾದ 05 ಎಕರೆ 15 ಗುಂಟೆ ಜಮೀನು ನಿಮ್ಮ ಅಣ್ಣನ ಹೆಸರಿನಲ್ಲಿ ಮುಟೇಶನ್ ಮಾಡಿಸಿದ್ದಾರೆಂದರೆ ಸರಿಯಲ್ಲ. ಮುಟೇಶನ್ ಮಾಡಿಸಲು ನಿಮ್ಮ ತಾಯಿ ಒಪ್ಪಿಗೆ ಕೊಟ್ಟಿದ್ದಾರೆಂದರೆ ಸರಿಯಲ್ಲ. ನಿಮ್ಮ ತಾಯಿ ಇದ್ದಾಗ ಒಪ್ಪಿಗೆ ಕೊಟ್ಟಿದ್ದರೂ ಈಗ ಜಮೀನು ವಾಪಸ್ಸು ಪಡೆಯಲು ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮಗೆ ಗೊತ್ತಿಲ್ಲದಂತೆ ಮೋಸದಿಂದ ಜಮೀನು ಮುಟೇಶನ್ ಮಾಡಿಸಿಕೊಂಡಿದ್ದಾರೆಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ